ಬಗ್ಗೆ ಕಳವಳ ಪಡುತ್ತಿರುವುದಿದ್ದರೆ ಅದು 'ಕ್ರಿಕೆಟಿನ ತವರು' ಎಂದು ಶತಮಾನದಿಂದ ಕರೆಸಿಕೊಳ್ಳುತ್ತ ಹೊಗಳಿಕೆ, ಪ್ರೀತಿ. ಹೆಮ್ಮೆ ಮತ್ತು ಹೊಣೆಗಾರಿಕೆಯ ಭಾರ ಹೊತ್ತ ಲಾರ್ಡ್ಸ್ ಮೈದಾನ ಇರಬಹುದು. ಲಾರ್ಡ್ಸ್‌ನ ಪೆವಿಲಿಯನ್‌ಗೆ ನೀವು ಭೇಟಿ ನೀಡಿದ್ದರೆ ಆ ಐತಿಹಾಸಿಕ ಮೈದಾನದಲ್ಲಿ ಸಾಹಸ ಮೆರೆದ ಕ್ರಿಕೆಟಿಗರ ಹೆಸರುಗಳ ಫಲಕವನ್ನು ಗೋಡೆಗೆ ತೂಗು ಹಾಕಿದ್ದು ಗಮನಿಸಿರುತ್ತೀರಿ. ಮತ್ತೆ ಅದರಲ್ಲಿ ವರ್ಷ ಕಳೆದಂತೆ ಆಂಗ್ಲರ ಹೆಸರು ಕಡಿಮೆ ಆಗುತ್ತಿರುವುದನ್ನೂ. ಕಣ್ಣುಕುಕ್ಕುವ ಹಚ್ಚ ಹಸುರಿನ ಹುಲ್ಲಿನ ಹೊದಿಕೆಯ ಕೆಳಗೆ, ಮೆತ್ತಗೆ ಹೆಜ್ಜೆ ಇಟ್ಟು ನಡೆಯುವ ಮತ್ತೆ ಬೀಸುವ ತಂಗಾಳಿಗೆ ಮೈ ಸೆಟೆದು ಪಟಪಟ ರೆಕ್ಕೆ ಬಡಿದು ಹಾರುವ ಪಾರಿವಾಳಗಳ ಗುಂಪಿನ ನೆರಳಲ್ಲಿ ಮತ್ತು ಮೈದಾನವನ್ನು ಕೋಟೆಯಂತೆ ಸುತ್ತುವರಿದ ಹಳೆಯ ಕಟ್ಟಡಗಳು, ಪೆವಿಲಿಯನ್ ಮತ್ತು ಡ್ರೆಸಿಂಗ್ ರೂಂಗಳ ಸುತ್ತಿನ ಕೋಟೆಯ ಒಳಗೆ ಹುದುಗಿ ಸೆರಗಿನ ತುದಿಯನ್ನು ಬೆರಳಿಗೆ ಸುತ್ತುತ್ತ ಯೋಚಿಸುತ್ತಿರುವುದಿದ್ದರೆ ಅದು ಲಾರ್ಡ್ಸ್ ಕ್ರೀಡಾಂಗಣ ಮಾತ್ರ ಇರಬಹುದು.

ಭಾರತದಲ್ಲಿ ಮಣ್ಣಿನ ಆಟವಾದ ಹಾಕಿಯನ್ನು ಹಿಂದೆ ತಳ್ಳಿ ಕ್ರಿಕೆಟ್ ಮೆರೆಯುವಂತೆ, ಇಂಗ್ಲೆಂಡಿನ ಕ್ರಿಕೆಟ್ ಮೈದಾನಗಳಲ್ಲಿನ ಸಣ್ಣಪುಟ್ಟ ಚಪ್ಪಾಳೆ, ಶಿಳ್ಳೆಗಳನ್ನು ಮಿಕ್ಕಿಮೀರಿ ಫುಟ್ಬಾಲ್, ರಗ್ಬಿಗಳ ಉನ್ಮಾದ ಉತ್ಸಾಹ ಮುಗಿಲು ಮುಟ್ಟುತ್ತದೆ.

